ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಸಂಸದೀಯ ವ್ಯವಹಾರಗಳ ಸಚಿವರು) : ಲಿಖಿತ ಮೂಲಕ ಉತ್ತರಿಸುವ 25ನೇ ಪಟ್ಟಿಯಲ್ಲಿರುವ 97 ಪ್ರಶ್ನೆಗಳ ಪೈಕಿ, ನಮೂದಿಸಿದ ಪ್ರಶ್ನೆಗಳನ್ನು ಹೊರತುಪಡಿಸಿ, ಇನ್ನು ಉಳಿದ 63 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು : ಸಭೆಯ ಮುಂದೆ ಇಡಲಾಗಿದೆ.

ಹಾಸನ ಕ್ಷೇತ್ರದ ಶಾಂತಿಗ್ರಾಮದ ಪಶುವೈದ್ಯ ಶಾಲೆಯ ಕಟ್ಟಡ

2560 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಹಾಸನ ಕ್ಷೇತ್ರದ ಶಾಂತಿಗ್ರಾಮದ ಪಶುವೈದ್ಯ ಶಾಲೆಯ ಕಟ್ಟಡದ ಮತ್ತು ಮಡೇನೂರು (ಸಾರಪುರ) ಗ್ರಾಮದ ಆಯರ್ವೇದದ ಆಸ್ಪತ್ರೆಯ ಕಟ್ಟಡಗಳು ತುಂಬಾ ಶಿಥಿಲವಾಗಿದ್ದು ಅದು ಬೀಳುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಲಿ ಇರುವ ಅಸಮರ್ಪಕ ಕಟ್ಟಡಗಳಿಗೆ ಬದಲಾಗಿ ಸೂಕ್ತ ಕಟ್ಟಡ ಕಟ್ಟಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಬಂದಿದೆ.

ಆ) 1991-92ನೇ ಸಾಲಿನ ಜಿಲ್ಲಾ ಪರಿಷತ್ತಿನ ಆಯವ್ಯಯದಲ್ಲಿ ಸಾರಪುರ ಗ್ರಾಮದ ಆಯುರ್ವೇದಿಕ ಆಸ್ಪತ್ರೆಯ 2 ಲಕ್ಷ ಅಂದಾಜಿನ ಹೊಸ ಕಟ್ಟಡ ನಿರ್ಮಾಣಕ್ಕೆ 30 ಸಾವಿರ ರೂಪಾಯಿಗಳನ್ನು ಒದಗಿಸಲಾಗಿದೆ.

ಶಾಂತಿ ಗ್ರಾಮದ ಪಶುವೈದ್ಯ ಶಾಲೆಯ ಶಿಥಿಲಗೊಂಡ ಕಟ್ಟಡ ದುರಸ್ತಿಯನ್ನು ಕ್ರಮ ಕೈಗೊಳ್ಳಲಾಗುವುದು. ಹೊಸ ಕಟ್ಟಡ ಕಟ್ಟಲು ಪ್ರಸ್ತಾವನೆಯಿರುವುದಿಲ್ಲ.

ಏತ ನೀರಾವರಿ ಯೋಜನೆಯಿಂದ ಹಾಸನ ತಾಲ್ಲೂಕಿನ ಪ್ರದೇಶಕ್ಕೆ ಶಾಶ್ವತ ನೀರು ಸರಬರಾಜು

2564 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕ್ಷೇಮಾವತಿ ನದಿಯ ಕಾಮಸಮುದ್ರದ ಹತ್ತಿರ ಕಾರ್ಯಗತವಾಗುತ್ತಿರುವ ಏತ ನೀರಾವರಿ ಯೋಜನೆಯಿಂದ ಹಾಸನ ತಾಲ್ಲೂಕಿನ ಪ್ರದೇಶಕ್ಕೆ ಶಾಶ್ವತ ಪರಿಹಾರ ಕ್ರಮವಾಗಿ ನೀರೊದಗಿಸಲು ಸರ್ಕಾರ ನಿರ್ಧರಿಸಿರುವುದು ನಿಜವಲ್ಲವೆ?

ಆ) ಈ ಬಗ್ಗೆ ಕಾಲುವೆ ನಿರ್ಮಾಣ ಮಾಡಲು ನಕಾಶೆ ಮತ್ತು ಅಂದಾಜು ತಯಾರಾಗಿದೆಯೇ?

ಇ) ಈ ಅಂದಾಜಿನ ಮೊಬಲಗೆಷ್ಟು?

ಈ) ಈ ಯೋಜನೆಯಿಂದ ಹಾಸನ ತಾಲ್ಲೂಕಿನ ಯಾವ ಯಾವ ಹಳ್ಳಿಗಳ ಎಷ್ಟೆಷ್ಟು ಎಕರೆಗಳಿಗೆ ನೀರೊದಗಲಿದೆ. ವಿವರಗಳನ್ನೊದಗಿಸುವುದು?